ತೆಗೆದರು. ಹತ್ತು ಕಥಾಸಂಕಲನಗಳಿದ್ದವು. ಎಲ್ಲಾ ಓದಿ ಒಂದನ್ನು ಆಯ್ಕೆ ಮಾಡಬೇಕು. ಅಂಕಗಳನ್ನು ಕೊಡುವುದರೊಂದಿಗೆ ವಿಮರ್ಶಾತ್ಮಕವಾಗಿ ಅಭಿಪ್ರಾಯ ಬರೆಯಬೇಕು. ಹತ್ತು ಪುಸ್ತಕಗಳನ್ನು ಓದುವುದು; ಅದೂ ಟಿಪ್ಪಣಿ ಮಾಡಿಕೊಳ್ಳುತ್ತಾ. ನಿರುತ್ಸಾಹ ಕವಿಯಿತು. ಒಂದು ಪುಸ್ತಕ ತೆರೆದು ಕಣ್ಣು ಹಾಯಿಸಿದರು. ಏನೇನೋ ಕಥಾಶೀರ್ಷಿಕೆಗಳು. ಪ್ರಕಾಶಕರ, ಲೇಖಕರ ಅರಿಕೆ, ಪ್ರಸ್ತಾವನೆಗಳು. ಹೆಸರು ಮಾಡಿದ ಸಾಹಿತಿಗಳಿಂದ ಮುನ್ನುಡಿ ಬೆನ್ನುಡಿ. ಮತ್ತೆ ಫೋನು ರಿಂಗಣಿಸಿತು. ಮತ್ತೊಂದು ಸಂಘದವರಿಂದ ಅದೇ ವಿನಂತಿಬೆರೆತ ಆಗ್ರಹ. ಎರಡನೆ ಕಟ್ಟನ್ನು ಎತ್ತಿಕೊಂಡು ಬಿಡಿಸಿದರು. ಹನ್ನೆರಡು ಕಾದಂಬರಿಗಳಿದ್ದವು. ಒಂದನ್ನು ಆಯ್ಕೆ ಮಾಡಬೇಕು. ಅದೂ ತಲುಪಿ ಎರಡು ತಿಂಗಳ ಮೇಲಾಗಿತ್ತು. ಹೆಂಡತಿಗೆ ಹಚ್ಚಿಬಿಟ್ಟರೆ ಹೇಗೆ ಅನ್ನುವ ಉಪಾಯ ಹೊಳೆಯಿತು. ಹೀಗೀಗೆ ಟಿಪ್ಪಣಿ ಮಾಡಿಕೋ ಅಂದರೆ ವಿಮರ್ಶಾತ್ಮಕವಾಗಿ ಮಾಡತಾಳೆ; ಬುದ್ಧಿವಂತೆ ಅನಿಸಿತು. ಈಗಾಗಲೆ ಹತ್ತುಸಾರಿ ನೆನಪಿಸಿ ಅಲವತ್ತುಕೊಂಡಿದಾಳೆ. ಈಗ ಅವಳ ತಲೆಗೆ ಕಟ್ಟಿದರೆ ಖಂಡಿತ ತಿರಸ್ಕರಿಸುವುದಲ್ಲದೆ ವೃಥಾ ಬೈಗುಳವನ್ನೂ ಕೇಳಬೇಕಷ್ಟೆ ಅನ್ನುವುದು ಖಾತ್ರಿಯಿದ್ದುದಕ್ಕೆ ಆ ವಿಚಾರ ಕೈಬಿಟ್ಟರು. ಒಂದು ಪುಸ್ತಕದ ಮೇಲೆ ಸುಮ್ಮನೆ ಕಣ್ಣು ಹಾಯಿಸುತ್ತಿದ್ದಾಗ ಹೊಳೆಯಿತು. ಅದೇ ಸರಿ, ಅನಿಸಿ ಬಿಳಿಹಾಳೆ ಪೆನ್ನು ಕೈಗೆತ್ತಿಕೊಂಡರು. ಮುನ್ನುಡಿ ಬೆನ್ನುಡಿಗಳಲ್ಲಿ ಕಥೆಯ ಸಾರ ಮತ್ತು ಅಭಿಪ್ರಾಯಗಳಿದ್ದವು. ತನ್ನಂತಹ ಹೆಸರು ಮಾಡಿದವರೆ ಓದಿ ಬರೆದಿದ್ದು. ಓದಿ ಟಿಪ್ಪಣಿ ಮಾಡುತ್ತ ಅಂಕಗಳನ್ನು ಕೊಡುತ್ತಾ ಹೋದರು. ಮಧ್ಯಾಹ್ನದೊಳಗೆ ಬಹುಮಾನಿತ ಕಾದಂಬರಿ, ಸಂಕಲನಗಳ ಆಯ್ಕೆಯಾಗಿ ಹೋಯಿತು. ಪತ್ರಗಳನ್ನು ಕವರಿಗೆ ಹಾಕಿ ವಿಳಾಸ ಬರೆದವರು, ಕೆಲಸ ಮುಗಿಸಿ ಮನೆಗೆ ಹೊರಟ ಚಂಪಾಳಿಗೆ ಗೇಟಿನ ಹತ್ತಿರ ಕೊಟ್ಟು ದಾರಿಯಲ್ಲಿ ಟಪಾಲುಡಬ್ಬಿಯಲ್ಲಿ ಹಾಕಲು ಹೇಳಿದರು. ಅಡುಗೆಕೋಣೆಯಲ್ಲಿದ್ದವರಿಗೆ ಗೇಟಿನಲ್ಲಿ ಬರುವವರು ಕಾಣಿಸುವಂತೆ ವಿನ್ಯಾಸ ಮಾಡಿದ್ದ ಮನೆ ಅವರದು.

ಮಧ್ಯಾಹ್ನ ಊಟದ ಅನಂತರ ಅರ್ಧತಾಸು ವಿಶ್ರಮಿಸುವುದು ರೂಢಿ. 'ಕೆಲಸ ಮುಗಿಸಿದ ಹಾಗಿದೆ; ಇಷ್ಟು ಬೇಗ ಓದಿಯಾಯ್ತ?' ಊಟ ಮಾಡುವಾಗ ಬಂದ ಪ್ರಶ್ನೆಗೆ, 'ಹ್ಞಾ..ಹ್ಞಾ. ಓದಲು ಕುಳಿತ್ರೆ ಅದಕ್ಕೆಲ್ಲ ಎಷ್ಟು ಸಮಯ...' ಅಂದು ಮುಗಿಸಿದ್ದರು. ಅದಕ್ಕಿಂತ ಆ ಸಮಯದಲ್ಲಿ ಎಡಗೈ ಕೆನ್ನೆಗೆ ಆನಿಸಿಕೊಂಡು ಬೆರಳು ಚೀಪುತ್ತ ತನ್ನನ್ನೇ ನೋಡುತ್ತ ಕೇಳಿದ ತಾಪಸಿಯ ಭಂಗಿ ಕಣ್ಣೆದುರು ಬಂತು. ಈ ವಯಸಲ್ಲು ಆಕರ್ಷಣೆಯ ಲೇಪ ಮಾಸಿಲ್ಲ ಅನಿಸಿತು. ಅದು ಹೇಗೆ ಸುಳಿಗಳಂತೆ ಅಂತಹ ಸೆಳೆತಗಳೆಲ್ಲ ಮೂಡಿದವೋ ಅನ್ನುವ ಜಿಜ್ಞಾಸೆ ಎದ್ದಿತು. ತನಗಾಗ ಐವತ್ತೇನೊ. ಹೆಸರು ಕನಕವಲ್ಲಿ ಅನಿಸುತ್ತದೆ. ಅವಳದು ಕಂದು ಬಣ್ಣ. ಕನ್ನಡಕ ಹಾಕುತ್ತಿದ್ದಳು. ಎದುರು ಕೂಡಿಸಿಕೊಂಡು ಆಯ್ದ ಶಬ್ದಗಳನ್ನು ಹಾಕಿಸುವಾಗ, ಪ್ರಭಾವ ಬೀರುವಂತೆ ವಾಕ್ಯ ರಚನೆ ಹೇಳುವಾಗ ಅವಳ ಮುಖದಲ್ಲಿ ಮೂಡುವ ಬೆರಗು ಕಾಣಿಸುತ್ತಿತ್ತು. ವಿವರಣೆಯಲ್ಲಿ ವಿಷಯದ ಆಳವನ್ನು ತಲುಪುತ್ತ, ಸಂಬಂಧಿಸಿದ ಪುಸ್ತಕ ಕೊಟ್ಟು ಮನನ ಮಾಡಿಕೊ ಅನ್ನುವಾಗ ಅವಳ ಮುಖದಲ್ಲಿ ಮೂಡುವ ಆರಾಧನಾ ಭಾವ. ಅವಳನ್ನು ಬೈದದ್ದೂ ಇತ್ತು. ಅದೇನೋ ಆಕರ್ಷಣೆ ಮೂಡಿ ಮೂಡಿ ನಿಲ್ಲುತ್ತಿತ್ತು. ಬುದ್ಧಿವಂತಳೆ; ಆದರೆ ಇಂಗ್ಲಿಷ್ ಭಾಷೆಯ ಲಯದಲ್ಲಿ ಬರವಣಿಗೆ ಬರುತ್ತಿಲ್ಲ. ಇದನ್ನೆ ಹಿಡಿದು ತಾನು ಇಂಗಿತವಾಗಿ ಸೂಚನೆ ಕೊಡುವುದು ಕೊನೆಗವಳಿಗೆ ಅರ್ಥವಾಗಿ ತನ್ನೊಂದಿಗೆ ಎಷ್ಟು ಬಾರಿ... ಲೆಕ್ಕ ಹಾಕಿತು ಮನಸು. ತಾನು ಕಮಲೇಶನಿಂದ ಬರೆಸಿ, ಮುಗಿಸಿದ್ದಾಗಿತ್ತು. ಅವಳೀಗ ಯಾವ ಕಾಲೇಜಲ್ಲಿದಾಳೊ. ಮಗ್ಗಲು ಬದಲಿಸಿದರು. ಮತ್ತೊಬ್ಬಳು... ಅವಳ ಹೆಸರು ಮಾತ್ರ ನೆನಪಾಗುತ್ತಿಲ್ಲ. ಬಿಳಿಯ ಬಣ್ಣ, ಎತ್ತರಕ್ಕಿದ್ದಳು. ಎಡಗೆನ್ನೆಯ ಮೇಲೆ ಉದ್ದಿನಕಾಳಿನಷ್ಟು ಮಚ್ಚೆಯಿತ್ತು. ದಪ್ಪ ಕೂದಲು. ಇಂಗ್ಲಿಷ್ ಮೇಲೆ ಸಾಹಿತಿಯ ಹಿಡಿತವಿತ್ತು. ಎದುರು ಕೂಡಿಸಿಕೊಂಡು ಬರೆದಿದ್ದನ್ನು ತಿದ್ದಿ ಸೂಚನೆ ಕೊಡುವಾಗ ತನ್ನ ಕಣ್ಣು ಅಯಾಚಿತವಾಗಿ ಆ ಮಚ್ಚೆಯ ಮೇಲೇ ಹೋಗುತ್ತಿತ್ತು. ಇಡಿಯ ಮುಖಕ್ಕೆ ಅದರಿಂದಲೆ